ಆ ಸಾಹಸಿಗರು ತತ್ತರಿಸಿಹೋದರು. ಅಂತಿಮವಾಗಿ ನ್ಯೂಜಿಲೆಂಡ್ ಸರ್ಕಾರ ಹ್ಯೂಮರ್ ಸುರಂಗವನ್ನು 1954ರಲ್ಲಿ ಸಾರ್ವಜನಿಕರಿಗೆ ತೆರೆಯಿತು. ಅಲ್ಲಿಯವರೆಗೂ ಮಿಲ್‌ಫೋರ್ಡ್‌ಸೌಂಡ್ ಪ್ರವಾಸಿಗರಿಗೆ ಅಜ್ಞಾತವಾಗಿಯೇ ಉಳಿದಿತ್ತು. ಗೈಡ್ ಸಂಕ್ಷಿಪ್ತವಾಗಿ ಇಷ್ಟು ವಿಷಯ ತಿಳಿಸುವಷ್ಟರಲ್ಲಿ ವಾಹನಗಳು ಮುಂದೆ ಚಲಿಸಿದ್ದವು. ಸ್ವಲ್ಪ ಹೊತ್ತಿನಲ್ಲಿಯೇ ಮಿಲ್‌ಫೋರ್ಡ್ ಸೌಂಡ್ ಕಣಿವೆಯ ಸಮೀಪ ತಲುಪಿದ್ದೆವು.

ಮೊದಲಿಗೆ ಕಣ್ಣಿಗೆ ಬಿದ್ದದ್ದು ಹೊರಡಲು ಸಜ್ಜಾಗಿದ್ದ ಪಿವೊಪಿವೊತಾಹಿ ಹೆಸರಿನ ಕ್ರೂಸರ್. ಎದುರಿಗೆ ಭಯಂಕರ ಮಿಲ್‌ಫೋರ್ಡ್ ಕಣಿವೆ ಬಾಯ್ತೆರೆದು ನಿಂತಿತ್ತು. ಪೂರ್ವ ದಿಕ್ಕಿನಿಂದ ಹಾಲಿಫೋರ್ಡ್, ಪಶ್ಚಿಮದಿಂದ ಕ್ಲಿಡ್ಡೂ ಎಂಬ ನದಿಗಳು ಭೋರ್ಗರೆದು ಹರಿಯುತ್ತಾ ಬಂದು ಸೇರುವ ದೃಶ್ಯ ಅದ್ಭುತವಾಗಿತ್ತು. ಬೋರ್ಡಿಂಗ್‌ಪಾಸ್, ಲಂಚ್‌ಪಾಸ್ ಪಡೆದು ಕ್ರೂಸ್ ಒಳಗೆ ಕಾಲಿರಿಸಿದಾಗ, ನೆಲ ಅಂತಸ್ತು ಮತ್ತು ಮೊದಲ ಅಂತಸ್ತಿನ ಪ್ರವಾಸಿಗರು ತಮ್ಮ ಆಸನಗಳಲ್ಲಿ ಕುಳಿತು ಮಧ್ಯಾಹ್ನದ ಊಟ ಆರಂಭಿಸಿದ್ದರು. ನನ್ನ ದೃಷ್ಟಿ ಮಾತ್ರ ಕಣಿವೆಯ ಎಡ–ಬಲಗಳ ಭೂದೃಶ್ಯಗಳ ಕಡೆಗೆ ಸೆಳೆಯುತ್ತಿತ್ತು. ಊಟದ ಬಾಕ್ಸ್, ಟ್ರೈಪಾಡ್, ಕ್ಯಾಮೆರಾ ಹೊತ್ತು ಡೆಕ್ಕಿನ ಮೇಲೆ ಕಾಲಿರಿಸಿದ್ದೇ ತಡ ಭಯಂಕರ ಬಿರುಗಾಳಿಗೆ ತತ್ತರಿಸಿ ಹೋದೆ. ತಲೆಯ ಮೇಲಿನ ಟೋಪಿ, ಊಟದ ಬಾಕ್ಸ್ ಹಾಗೂ ಲೋಟ ಗಾಳಿಗೆ ತೂರಿಹೋದವು. ಕ್ಯಾಮೆರಾ, ಟ್ರೈಪಾಡ್ ಗಟ್ಟಿಯಾಗಿ ಹಿಡಿದು ಡೆಕ್ಕಿನ ಮೂಲೆಯ ಕಂಬಹಿಡಿದು ಭದ್ರವಾಗಿ ಕುಳಿತೆ. ಸುಂದರ ಮತ್ತು ಭಯಾನಕ ಕಣಿವೆಯ ದೃಶ್ಯಗಳು ನನ್ನ ಹಸಿವನ್ನೇ ಮರೆಸಿ ಬಿಟ್ಟಿದ್ದವು.

ಕಡು ನೀಲಿಬಣ್ಣದ ಮಿಲ್‌ಫೋರ್ಡ್ ಸೌಂಡ್ ಕಣಿವೆಯ ಇಕ್ಕೆಲಗಳಲ್ಲಿ ಶಿಖರಗಳು ಗೋಡೆಗಳಂತೆ ಆಕಾಶದ ಕಡೆಗೆ ಮೊನಚಾಗಿ ಬೆಳೆದು ನಿಂತಂತೆ ಭಾಸವಾಗುತ್ತಿದ್ದವು. ಹಿಮ ಮೆತ್ತಿದ ಶಿಖರಗಳಿಂದ ಮಂಜು, ಹೊಗೆ ಮೇಲೇಳುತ್ತಿತ್ತು. 3900 ಅಡಿ ಎತ್ತರದ ಆನೆಶಿಖರ, 1302 ಅಡಿ ಎತ್ತರದ ಸಿಂಹಶಿಖರಗಳು ಆ ಪ್ರಾಣಿಗಳ ಮುಖವನ್ನೇ ಹೋಲುತ್ತಿದ್ದವು. ಅವುಗಳಲ್ಲಿ ಬಾವೆನ್ ಜಲಪಾತ, ಬ್ರೋನೆ ಜಲಪಾತ, ಸ್ಟರ್ಲಿಂಗ್ ಜಲಪಾತ ಹಾಗೂ ಹೆಲೆನ್ ಜಲಪಾತಗಳು ಜಗತ್ತಿನ ಎತ್ತರದ ಜಲಪಾತಗಳ ಸಾಲಿಗೆ ಸೇರಿರುವುದು ಅಚ್ಚರಿಯ ಸಂಗತಿ, ಅವು ವರ್ಷವಿಡೀ ಧುಮುಕಿ ಪ್ರವಾಸಿಗರ ಮನತಣಿಸುತ್ತವೆ.

ನೀರೊಳಗೆ ಡೈ ಹೊಡೆಯುವ ಡಾಲ್ಫಿನ್ನು, ಬಂಡೆಯ ಮೇಲೆ ಮೈ ಕಾಸುವ ಸೀಲುಗಳು ಪುಟ್ಟ ಪುಟ್ಟ ಹೆಜ್ಜೆ ಇಡುತ್ತಾ ಓಡಾಡುವ ಪೆಂಗ್ವಿನ್‌ಗಳು ಅಚ್ಚರಿಗೊಳಿಸುತ್ತವೆ. ಪಕ್ಷಿತಜ್ಞರ ಪ್ರಕಾರ ಮಿಲ್‌ಫೋರ್ಡ್‌ಸೌಂಡ್ ಪೆಂಗ್ವಿನ್‌ಗಳ ಬಾಣಂತಿಮನೆ. ಮಿಲ್‌ಫೋರ್ಡ್ ಕಣಿವೆಯ ಹ್ಯಾರಿಸನ್ ಕೋವಿಯಿಂದ ವಿಚಿತ್ರ ಧ್ವನಿಯೊಂದು ಕೇಳಿಬರುತಿತ್ತು. ಅದು ಪಿವೊಪಿವೊ ಪಕ್ಷಿಯ ಧ್ವನಿ. ಆ ಪಕ್ಷಿ ಈಗ ಅವಸಾನ ಹೊಂದಿದೆ



**ಮಿಲ್‌ಫೋರ್ಡ್ ಜಲದಾಳದ ಭೂಗರ್ಭದ ಕೌತುಕಲೋಕ ಜಗತ್ತಿನಲ್ಲಿ ಮತ್ತೊಂದು ಇರಲಿಕ್ಕಿಲ್ಲ. ಅದನ್ನು ನೋಡಲು ತಿಂಗಳು ಮೊದಲೇ ಮುಂಗಡ ಟಿಕೆಟ್ ಕಾದಿರಿಸಿಕೊಳ್ಳಬೇಕು.**

ಎಂದು ನ್ಯೂಜಿಲೆಂಡ್ ಮಾವೋರಿ ಜನಾಂಗ ಅಭಿಪ್ರಾಯಪಡುತ್ತದೆ. ಆದರೆ ಆ ಊರಿಗೆ ಪಿವೊಪಿವೊತಾಹಿ ಎಂಬ ಹೆಸರು ಮಾತ್ರ ಇಂದಿಗೂ ಶಾಶ್ವತವಾಗಿ ಉಳಿದುಕೊಂಡಿದೆ.

ಮಿಲ್‌ಫೋರ್ಡ್ ಕಣಿವೆಯ ಮತ್ತೊಂದು ವಿಸ್ಮಯ 450 ಮೀಟರ್ ಆಳದ ಜಲಾಂತರ್ಗತ ಗುಹೆ. ಪರ್ವತಗಳ ಬೇರು ನೀರಿನಾಳಕ್ಕೆ ಚಾಚಿಕೊಂಡು ಭಾರಿ ಅಲೆಗಳ ಕೆಳಗೆ ಬಾಯ್ತೆರೆದು ಕಮಾನಿನ ಮಹಾದ್ವಾರದಂತೆ ಬಾಗಿಲು ತೆರೆದಿದೆ. ಅದರೊಳಗೆ ಹೊಕ್ಕರೆ ಬಗೆ ಬಗೆಯ ಮೀನು, ಮೃದ್ವಂಗಿ, ಕಪ್ಪುಹವಳ, ನಕ್ಷತ್ರಮೀನು ಕಣ್ಣಿಗೆ ಹಬ್ಬವುಂಟುಮಾಡುತ್ತವೆ. ಜಲದಾಳದ ಇಂಥ ಭೂಗರ್ಭದ ಕೌತುಕಲೋಕ ಜಗತ್ತಿನಲ್ಲಿ ಮತ್ತೊಂದು ಇರಲಿಕ್ಕಿಲ್ಲ. ಇದನ್ನು ನೋಡಲು ತಿಂಗಳು ಮೊದಲೇ ಮುಂಗಡ ಟಿಕೆಟ್ ಕಾದಿರಿಸಿಕೊಳ್ಳಬೇಕು.

ಮಾವೋರಿ ಜನಾಂಗದ ಅಭಿಪ್ರಾಯದಂತೆ ಮಿಲ್‌ಫೋರ್ಡ್‌ಸೌಂಡ್ ಕಣಿವೆ ಹಸಿರು ಜೇಡಶಿಲೆಯ ಖನಿ. ಕಣಿವೆಯ ಉದ್ದವೇ 17 ಕಿ.ಮೀ. ಹಾಗೂ ಅಗಲ 3 ಕಿ.ಮೀ. ವಿಶೇಷವೆಂದರೆ ಈ ಕಣಿವೆ ಕ್ಲಿಡ್ಡೂ ಎಂಬ ನದಿ ಬಂದು ಟಾಸ್ಮನ್ ಸಮುದ್ರ ಸೇರುವ ಸಂಗಮ. ಟಾಸ್ಮನ್ ಸಮುದ್ರದ ಉಪ್ಪು ನೀರಿನ ಮೇಲೆ 6 ಮೀಟರ್ (18 ಅಡಿ) ಕ್ಲಿಡ್ಡೂ ನದಿಯ ಸಿಹಿನೀರಿನ ಪದರ ಹರಡಿಕೊಂಡಿದೆ. ಜಲದಾಳದ ಜೀವಜಂತುಗಳಿಗೆ ಈ ಪದರ ಪ್ರಖರ ಸೂರ್ಯರಶ್ಮಿಯನ್ನೂ ತಡೆದು ಪೂರಕ ವಾತಾವರಣ ನಿರ್ಮಿಸಿದೆ.

ಕೋಟ್ಯಂತರ ವರ್ಷಗಳ ಹಿಂದೆ ಹಿಮನದಿಗಳ ಸವಕಳಿಯಿಂದ ರೂಪುಗೊಂಡ ಭೂದೃಶ್ಯಗಳೇ ಒಡೆದ ತೀರಗಳು ಅಥವಾ ಫೋರ್ಡ್. ಫಿನ್‌ಲೆಂಡ್, ಇಂಗ್ಲೆಂಡ್, ಅಮೆರಿಕಗಳಲ್ಲಿ ಇಂಥ ದ್ವೀಪಗಳ ದಡದಲ್ಲಿ ವಾಟರ್ ಮಿಲ್ಲುಗಳಿವೆ. ಅವುಗಳಿಗೆ ಮಿಲ್‌ಫೋರ್ಡ್ ಎಂದು ಹೆಸರು. ಅವು ಹಡಗು, ದೋಣಿಗಳು ಬಂದು ನಿಲ್ಲುವ ಸುರಕ್ಷಿತ ತಾಣಗಳು ಹೌದು. ನ್ಯೂಜಿಲೆಂಡ್‌ನಲ್ಲಿರುವುದು ಇಂಥದ್ದೇ ಒಂದು ತಾಣ ಮಿಲ್‌ಫೋರ್ಡ್ ಸೌಂಡ್. ಇದು ನ್ಯೂಜಿಲೆಂಡ್‌ನ ಅತ್ಯಾಕರ್ಷಕ ಹೆಗ್ಗುರುತು.

1770ರಲ್ಲಿ ಭೂಅನ್ವೇಷಕ ಜೇಮ್ಸ್‌ಕುಕ್ ಈ ಸಮುದ್ರ ತೀರದಲ್ಲಿ ಹಾದುಹೋಗುವಾಗ ಭಯಾನಕ ಶಬ್ದ ಕೇಳಿ ಬೆಚ್ಚಿಬಿದ್ದು ಒಳಪ್ರವೇಶಿಸದೇ ಹಾಗೇ ಹೋಗಿದ್ದ. ನಂತರ ಸ್ಪೇನ್ ದೇಶದ ಅಲೆಸ್ಯಾಂಡ್ರೋ ಮಲಸ್ಪಿನಾ ವಿಚಿತ್ರ ಧ್ವನಿಯ ಜಾಡು ಹಿಡಿದು, ತೂಗು ಗುಂಡಿನಿಂದ ಅಳತೆ ಮಾಡಿ ಆ ಜಾಗವನ್ನು ಕಂಡುಹಿಡಿದು ಅದಕ್ಕೆ ಫೆಬಿರೊಪಾಯಿಂಟ್ ಎಂದು ಹೆಸರನ್ನೂ ಕೂಡ ನೀಡಿದ. ನಂತರ 1812ರಲ್ಲಿ ಅಲ್ಲಿಗೆ ಬಂದ ಕ್ಯಾಪ್ಟನ್ ಜಾನ್‌ಗ್ರೋನೊ ಆ ಸ್ಥಳಕ್ಕೆ ಮಿಲ್‌ಫೋರ್ಡ್ ಹ್ಯಾವನ್ ಎಂದು ಹೆಸರಿಟ್ಟ. ಅಂತಿಮವಾಗಿ ಬಂದ ಕ್ಯಾಪ್ಟನ್ ಲಾರ್ಡ್‌ಸ್ಟೋಕ್ ಕಣಿವೆಯ ವಿಚಿತ್ರ ಶಬ್ದ, ಜಲಪಾತಗಳ ಭೋರ್ಗರೆತವನ್ನೂ ಆಲಿಸಿ ಮಿಲ್‌ಫೋರ್ಡ್‌ಹ್ಯಾವೆನ್ ಅನ್ನೂ ಮಿಲ್‌ಫೋರ್ಡ್ ಸೌಂಡ್ ಎಂದು ಬದಲಾಯಿಸಿದ. ಈಗ ಮಿಲ್‌ಫೋರ್ಡ್ ಸೌಂಡ್ ಶಾಶ್ವತ ಹೆಸರಾಗಿ ಉಳಿದುಕೊಂಡಿದೆ. ಹಾಗೂ ಇದು ಯುನೆಸ್ಕೊ ವಿಶ್ವಪಾರಂಪರಿಕ ತಾಣಗಳ ಪಟ್ಟಿಗೆ ಸೇರಿದೆ. ಜಗತ್ತಿನಲ್ಲಿ ಅತೀ ಹೆಚ್ಚು ಪ್ರವಾಸಿಗರನ್ನೂ ಆಕರ್ಷಿಸುವ ತಾಣವೂ ಆಗಿದೆ.